# ‘ನಟನಾಗದಿದ್ದರೆ ಖಿನ್ನತೆಗೆ ತುತ್ತಾಗುತ್ತಿದ್ದೆ

**ಧನುಶ್ ಕೆ.**
**ಉದಯದ ‘ನಯನತಾರಾ’ದ ರಾಹುಲ್**



◆ **ಈ ಕಥೆಯಲ್ಲಿ ನಿಮ್ಮ ಪಾತ್ರ ಏನು?**

ಇಲ್ಲಿ ನಾನು ತಂದೆ– ತಾಯಿಗಿಂತ ಚಿಕ್ಕಮ್ಮನನ್ನು ಹೆಚ್ಚು ಪ್ರೀತಿ ಮಾಡುತ್ತೇನೆ. ಅವರು ಏನೇ ಹೇಳಿದರೂ ಅದುವೇ ನನ್ನ ಪಾಲಿನ ವೇದ ವಾಕ್ಯ ಎನ್ನುವ ನಂಬಿಕೆ ನನ್ನದು. ಅವರು ಏನೇ ಮಾಡಿದರೂ ಅದನ್ನು ಬೆಂಬಲಿಸುವ ವ್ಯಕ್ತಿತ್ವ ನನ್ನದು. ಏಕೆಂದರೆ ಅವರೇ ನನ್ನನ್ನು ಚಿಕ್ಕವಯಸ್ಸಿನಿಂದಲೂ ಪೋಷಣೆ ಮಾಡಿದ್ದಾರೆ. ಹೆತ್ತ ತಂದೆ– ತಾಯಿಯ ಪ್ರೀತಿಯನ್ನು ನಾನು ಅನುಭವಿಸಿಲ್ಲ. ನನ್ನ ಐಶ್ವರ್ಯವೇ ಚಿಕ್ಕಮ್ಮ. ಅವರು ಎಂದೂ ನನ್ನ ಬಗ್ಗೆ ಭಿನ್ನ–ಭೇದ ಎಣಿಸಿಲ್ಲ. ನನ್ನ ಪಾಲಿನ ದೇವರು ಅವರಾಗಿದ್ದಾರೆ ಹಾಗಾಗಿ ನನ್ನ ಆದ್ಯತೆ ಕೂಡ ಅವರೇ. ನಯನತಾರಾದಲ್ಲಿ ಪ್ರಧಾನ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ಈ ತಂಡ ಒಂದು ಕುಟುಂಬದಂತೆ ರೂಪುಗೊಂಡಿದೆ ಎಂದು ನನಗೆ ಅನಿಸುತ್ತದೆ. ಕಥೆಯ ವಿಷಯಕ್ಕೆ ಬಂದರೆ ಯಾವುದೇ ವಿಚಾರ– ವ್ಯವಹಾರ ಇದ್ದರೂ ಚಿಕ್ಕಮ್ಮನೇ ನನ್ನ ನಿರ್ಧಾರದ ದಿಕ್ಸೂಚಿ.

◆ **ನಟನಾಗಿ ಬೆಳೆದದ್ದು ಹೇಗೆ?**

2013 ರಿಂದ ನಟನಾಗುವ ಪ್ರಯತ್ನವನ್ನು ಆರಂಭಿಸಿದೆ. ನಟನೆ ಕಲಿಯಲು ತರಬೇತಿ ಶಾಲೆಗೆ ಸೇರಿದ್ದೆ. ಅಲ್ಲಿ ನಟನೆಯ ಮೂಲತತ್ವಗಳನ್ನು ಕಲಿಯುವ ಜೊತೆಗೆ ಅವಕಾಶವನ್ನು ಪಡೆಯುವ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿದ್ದೆ. ಅನೇಕ ವಿಫಲ ಯತ್ನಗಳ ನಡುವೆ ಒಂದೆರಡು ಧಾರಾವಾಹಿಗಳಲ್ಲಿ ಚಿಕ್ಕ ಪುಟ್ಟ ಪಾತ್ರಗಳಿಗೆ ತೃಪ್ತನಾಗಬೇಕಾಯಿತು. ನಾನು ಪೂರ್ಣಪ್ರಮಾಣದಲ್ಲಿ ನಟನಾಗಬೇಕು ಎಂದು ಬಯಸಿ ಬಂದಿದ್ದರಿಂದ ಇಲ್ಲಿ ನೆಲೆಗೊಳ್ಳಲು ಹೋರಾಟ ತೀವ್ರ ಮಾಡುವ ಅನಿವಾರ್ಯತೆ ಇತ್ತು. ಒಂದೆರಡು ವರ್ಷ ಒಂದೂ ಅವಕಾಶ ಸಿಗಲಿಲ್ಲ. ಏಕೆ ಹೀಗಾಗುತ್ತಿದೆ? ನನಗೆ ಸಿಕ್ಕ ಅವಕಾಶ ಮತ್ತೊಬ್ಬರ ಪಾಲಿಗೆ ದಕ್ಕುತ್ತಿದೆ ಎಂದು ಯೋಚಿಸುತ್ತಿದ್ದೆ. ಅದೇ ಸಮಯದಲ್ಲಿ ನಮ್ಮ ಮನೆಯಲ್ಲಿ ಒಂದಿಷ್ಟು ತೊಂದರೆಗಳು ಎದುರಾದವು. ಆ ಸಂದರ್ಭದಲ್ಲಿ ಈ ರಂಗದಿಂದ ದೂರ ಇರಲೇಬೇಕಾದ ಸಂದರ್ಭ ಬಂತು. ನಂತರ ಹಲವು ಆಡಿಷನ್‌ಗಳ ನಂತರ ಅಭಿನಯಕ್ಕೆ ಅವಕಾಶ ಪಡೆದೆ.

◆ **ನಯನತಾರಾದಲ್ಲಿಯೂ ನಾಯಕನ ದ್ವಂದ್ವ ಪ್ರೀತಿ ಏಕೆ?**

ನಮ್ಮ ಮನೆಯಲ್ಲಿ ದೀಪಾ ಎನ್ನುವವರ ಜೊತೆ ಮದುವೆ ಮಾಡುವ ಪ್ರಸ್ತಾಪ ಬರುತ್ತದೆ. ನನಗೆ ಆಕೆಯನ್ನು ಮದುವೆಯಾಗುವ ಬಯಕೆ ಇಲ್ಲ. ಆದರೆ ಎರಡೂ ಕುಟುಂಬಗಳಿಗೆ ಮಾಡುವ ಆಸಕ್ತಿ ಇರುತ್ತದೆ. ಅಸಹಾಯಕನಾದ ನನ್ನ ಮೇಲೆ ಕುಟುಂಬದ ಒತ್ತಡ ಹೆಚ್ಚಾಗುತ್ತದೆ. ಅಷ್ಟರಲ್ಲಿ ಅದು ಅಲ್ಲಿಗೇ ನಿಂತು ಹೋಗುತ್ತದೆ. ನಯನಾ ಮತ್ತು ತಾರಾ ಇಬ್ಬರು ಅಕ್ಕ ತಂಗಿಯರು. ನನಗೆ ಏನಾದರೂ ಸಮಸ್ಯೆಗಳು ಎದುರಾದಾಗ ನೈತಿಕವಾಗಿ ತಾರಾ ಬೆಂಬಲ ಬಯಸುತ್ತೇನೆ. ಈ ಸಂಬಂಧ ಫೋನ್ ಮಾಡಿ ನೆರವು ಪಡೆಯುತ್ತೇನೆ. ನಾನು ತಾರಾಗೆ ಫೋನ್ ಮಾಡಿದರೆ, ನನ್ನ ಜೊತೆ ನಯನಾ ಮಾತನಾಡುತ್ತಿರುತ್ತಾರೆ. ಅನೇಕ ಸಮಸ್ಯೆಗಳಿಗೆ ಅವರು ಪರಿಹಾರವನ್ನೂ ನೀಡುತ್ತಾರೆ. ನನ್ನ ಸಮಸ್ಯೆಗೆ ನಿರಂತರ ಪರಿಹಾರ ಸೂಚಿಸುವ ಕಾವ್ಯಾಳ ಮೇಲೆ ನನಗೆ ಪ್ರೀತಿ ಉಂಟಾಗುತ್ತದೆ. ಸಾಂಗತ್ಯಕ್ಕೆ ಮತ್ತೊಂದು ಜೀವ ಸಿಕ್ಕಿತು ಎಂದು ತಾರಾ ಮೇಲೆ ಮೋಹ ಬೆಳೆಯುತ್ತದೆ. ಕ್ರಮೇಣ ನಾನು ಅಂದುಕೊಂಡಿದ್ದೇ ಬೇರೆ ನನ್ನನ್ನು ಪ್ರೀತಿ ಮಾಡಿತ್ತಿದ್ದವರೇ ಬೇರೆ ಎನ್ನುವ ಸತ್ಯ ಗೊತ್ತಾಗುತ್ತದೆ.

◆ **ನಟ ಆಗದೇ ಇದ್ದರೆ ಏನಾಗುವ ಕನಸು ಇತ್ತು?**

ನಟ ಆಗದೆ ಇದ್ದರೇ ಏನು ಆಗುತ್ತಿದ್ದೆ ಎಂದು ಹೇಳಲು ಏನೂ ಇಲ್ಲ. ನಟನೇ ಆಗಬೇಕು ಎನ್ನುವುದು ನನ್ನ ಅದಮ್ಯ ಬಯಕೆಯಾಗಿತ್ತು. ನಾನು ಹೆಚ್ಚಿನ ವಿದ್ಯಾಭ್ಯಾಸವನ್ನೂ ಮಾಡಿಲ್ಲ. ನಟ ಆಗದೇ ಇದ್ದರೆ ಏನೋ ಕೆಲಸ ಮಾಡುತ್ತಿದ್ದೆ. ಅದು ಏನಾದರೂ ಆಗಬಹುದಿತ್ತು. ನಮ್ಮ ಮನೆಯಲ್ಲಿ ಬೇರೆ ಯಾವುದಾದರೂ ಕೆಲಸಕ್ಕೆ ಹಾಕುವ ಉದ್ದೇಶ ಇತ್ತು. ನಟನೇ ಆಗಬೇಕು ಎನ್ನುವ ನನ್ನ ಹುಚ್ಚು ಫಲಿಸದೇ ಇದ್ದರೆ ಖಿನ್ನತೆಗೆ ತುತ್ತಾಗುವ ಸಾಧ್ಯತೆಯೂ ಇತ್ತು ಎಂದೆನಿಸುತ್ತದೆ.

◆ **ನಟನಾಗಲು ತಾಲೀಮು ಹೇಗಿತ್ತು?**

ಅಭಿನಯದ ಬಗ್ಗೆ ನನಗೆ ಆಸಕ್ತಿ ಹೆಚ್ಚಿತ್ತು. ಆದರೆ ಅದನ್ನು ಹೇಗೆ ಕಲಿಯಬೇಕು ಏನು ಮಾಡಬೇಕು ಎನ್ನುವ ಅರಿವು ಇರಲಿಲ್ಲ. ನನ್ನ ಸ್ನೇಹಿತರ ನೆರವಿನಿಂದ ನಟನೆಯ ಶಾಲೆಗೆ ಸೇರಿದೆ. ಅಲ್ಲಿ ಮೂಕಾಭಿನಯ– ಸಂಭಾಷಣೆಯನ್ನು ಪ್ರಾಥಮಿಕ ಹಂತದಿಂದ ಕಲಿಸಿದರು. ಅದರ ಜೊತೆ, ಕ್ಯಾಮೆರಾ ಎದುರುಗೊಳ್ಳುವ ಜೊತೆಗೆ ಮೌನ ಮತ್ತು ಭಾವವನ್ನು ಸಂದರ್ಭಕ್ಕೆ ಹೇಗೆ ಪ್ರತಿಸ್ಪಂದಿಸಬೇಕು ಎನ್ನುವುದನ್ನೂ ಕಲಿತೆ. ಶೇ. 40 ರಷ್ಟು ಮಾತ್ರ ಅಲ್ಲಿ ಕಲಿಯಲು ಸಾಧ್ಯ ಆಯಿತು. ಒಂದು ಧಾರಾವಾಹಿಯಲ್ಲಿ ಪುಟ್ಟ ಪಾತ್ರ ಸಿಕ್ಕಿತು. ಮೊದಲ ಬಾರಿಗೆ ವೃತ್ತಿ ಮತ್ತು ಕಲಿಕೆ ಆರಂಭವಾಯಿತು. ಎಷ್ಟೇ ಕಲಿತಿದ್ದರೂ ವೃತ್ತಿ ಆರಂಭವಾದ ನಂತರವೇ ನೈಜ ಕಲಿಕೆಯನ್ನು ಆರಂಭಿಸುತ್ತೇವೆ. ಮುಂದೆ ಸಿನಿಮಾದಲ್ಲಿ ನಟಿಸಬೇಕು ಎನ್ನುವ ಆಸೆ ಇದೆ. ನನಗೆ ಕಥೆ ಯಾವುದೇ ಇರಲಿ ಪಾತ್ರ ಮಾತ್ರ ಪ್ರಧಾನವಾಗಿ ಇರಬೇಕು. ಅದು ಪಾಸಿಟಿವ್ ಆಗಿರಬಹುದು ಅಥವಾ ನೆಗೆಟಿವ್ ಆಗಿರಬಹುದು. ಕಥೆಯಲ್ಲಿ ಆ ಪಾತ್ರಕ್ಕೆ ಅತ್ಯುತ್ತಮ ಪೋಷಣೆ ಸಿಕ್ಕಿರಬೇಕು.

■ ರಾಘವೇಂದ್ರ ಕೆ.